ಮುಖ್ಯವಾಗಿ ಉತ್ತರ ಪ್ರದೇಶ, ಬಿಹಾರ, ಮಧ್ಯಪ್ರದೇಶ, ರಾಜಸ್ಥಾನ, ಹರಿಯಾಣ, ಪಶ್ಚಿಮ ಬಂಗಾಳ ಮತ್ತು ಈಶಾನ್ಯ ರಾಜ್ಯಗಳಲ್ಲಿ ಕಂಡುಬರುತ್ತದೆ.

## ಮನುಷ್ಯನಿರ್ಮಿತ ಧಾಮ

ಭಾರತದ ಜೀವವೈವಿಧ್ಯದ ಭೂಪಟದಲ್ಲಿ ಪುಟ್ಟ ರತ್ನದಂತೆ ಇದೆ ಖೇಲಾದೇವ್ ಪಕ್ಷಿಧಾಮ. ಇದೊಂದು ಮನುಷ್ಯ ನಿರ್ಮಿತ ಮತ್ತು ನಿರ್ವಹಣೆ ಮಾಡುತ್ತಿರುವ ಅಪರೂಪದ ಜೀವಿಗಳ ತಾಣ. ಚಳಿಗಾಲ ಬಂತೆಂದರೆ ಸಾವಿರಾರು ವೈವಿಧ್ಯಮಯ ಹಕ್ಕಿಗಳು, ನೂರಾರು ಪಕ್ಷಿಪ್ರಿಯರು ಇಲ್ಲಿ ನೆರೆಯುತ್ತಾರೆ.

ಸುಮಾರು 30 ಚದರ ಕಿ.ಮೀ. ಸುತ್ತಳತೆಯ ಪಕ್ಷಿಧಾಮವು 360 ಪಕ್ಷಿಪ್ರಭೇಧಗಳು, 380 ಹೂಗಳು, 50 ವಿಧದ ಮೀನುಗಳು, 13 ವಿಧದ ಹಾವುಗಳು, ಐದು ರೀತಿಯ ಹಲ್ಲಿಗಳು, ಏಳು ಬಗೆಯ ಆಮೆಗಳು ಸೇರಿದಂತೆ ಹಲವಾರು ಪ್ರಾಣಿಗಳಿಗೆ ಆಶ್ರಯ ನೀಡಿದೆ. ಚಳಿಗಾಲದಲ್ಲಿ ಸಾವಿರಾರು ವಲಸೆ ಹಕ್ಕಿಗಳು ಸೇರಿದಂತೆ ಸ್ಥಳೀಯ ಹಕ್ಕಿಗಳು ತಮ್ಮ ಸಂತತಿಯು ಮುಂದುವರಿಕೆಗಾಗಿ ಗೂಡು ಮಾಡಲೆಂದೇ ಇಲ್ಲಿಗೆ ಆಗಮಿಸುತ್ತವೆ.

ದಟ್ಟವಾದ ಕಾಡು ಎಂಬರ್ಥದಲ್ಲಿ ಹಿಂದೆ ಈ ಪ್ರದೇಶವನ್ನು 'ಘನಾ' ಎಂದು ಕರೆಯುತ್ತಿದ್ದರು. ಇಲ್ಲಿ ದನ ಮೇಯಿಸುವವರು ಬರುತ್ತಿದ್ದರಂತೆ. ಬಾಳೆಗಿಡದ ಸಸಿಯೊಂದರ ಮೇಲೆ ಹಸುವೊಂದು ತನ್ನ ಹಾಲನ್ನು ಬಿಡುತ್ತಿರುವುದನ್ನು ಕಂಡು ಗ್ರಾಮಸ್ಥರು ಅಲ್ಲಿ ನೆಲವನ್ನು ಕೆದಕಿದಾಗ ಶಿವನ ಲಿಂಗವು ಸಿಕ್ಕಿತಂತೆ. ಬಾಳೆಗಿಡದ ಬುಡದಲ್ಲಿ ಸಿಕ್ಕಿದ್ದರಿಂದ ಲಿಂಗವನ್ನು ಖೇಲಾದೇವ್ ಎಂದು ಕರೆದು ಪುಟ್ಟ ದೇಗುಲವನ್ನು ನಿರ್ಮಿಸಿದ್ದಾರೆ. ಮುಂದೆ ಖೇಲಾದೇವ್ ಎಂಬ ಶಿವನ ಹೆಸರಿನಿಂದಲೇ ಪಕ್ಷಿಧಾಮವನ್ನು ಕರೆಯಲಾಯಿತು. ರಾಜಸ್ಥಾನದ ಭರತ್‌ಪುರ್ ಬಳಿಯಿರುವುದರಿಂದ ಕೆಲವರು ಇದನ್ನು ಭರತ್‌ಪುರ್ ಪಕ್ಷಿಧಾಮವೆಂದೂ ಕರೆಯುವರು.

## ಪಕ್ಷಿಧಾಮದ ಇತಿಹಾಸ

ಮಳೆಗಾಲದ ನೀರು ಮಾತ್ರ ನಿಲ್ಲುವಂತಿದ್ದ ಈ ಪ್ರದೇಶದಲ್ಲಿ ಹೆಚ್ಚು ನೀರು ನಿಲ್ಲುವಂತೆ ಮಾಡಿದ್ದು ಭರತ್‌ಪುರ್ ಮಹಾರಾಜ ಸೂರಜ್‌ಮಲ್. 17ನೇ ಶತಮಾನದಲ್ಲಿ ಈತ ಗಂಭೀರ್ ಮತ್ತು ಬನಗಂಗಾ ನದಿಗಳ ಸಂಗಮದಲ್ಲಿ ಕಿರು ಅಣೆಕಟ್ಟನ್ನು ನಿರ್ಮಿಸಿದ. ಇದು ಮಹಾರಾಜರುಗಳ ಬೇಟೆಯ ನೆಚ್ಚಿನ ತಾಣವಾಗಿತ್ತು. ಬ್ರಿಟಿಷ್ ಅಧಿಕಾರಿಗಳು ಮತ್ತು ವೈಸರಾಯ್‌ಗಳನ್ನು ಓಲೈಸಲು ಅವರನ್ನು ಇಲ್ಲಿಗೆ ಕರೆಸಿ ಬೇಟೆಯಾಡಿಸಲಾಗುತ್ತಿತ್ತು. ಕಲ್ಲಿನಲ್ಲಿ ಕೆತ್ತಿರುವ ಬೇಟೆಯ ವಿವರಗಳನ್ನು ಈಗಲೂ ನೋಡಬಹುದು. 1938ರಲ್ಲಿ ಆಗಿನ ಗವರ್ನರ್ ಜನರಲ್ ಲಾರ್ಡ್ ಲಿನ್ಲಿಥ್‌ಗೋ ಒಂದೇ ದಿನ 4,273 ಹಕ್ಕಿಗಳನ್ನು ಬೇಟೆಯಾಡಿದ್ದನಂತೆ. 1982ರಲ್ಲಿ ಇದನ್ನು ರಾಷ್ಟ್ರೀಯ ವನ್ಯಧಾಮವೆಂದು ಘೋಷಿಸಲಾಯಿತು.

## ಸಲೀಂ ಅಲಿ ಅವರ ನೆನಪುಗಳು

ಪ್ರಖ್ಯಾತ ಪಕ್ಷಿ ಶಾಸ್ತ್ರಜ್ಞ ಸಲೀಂ ಅಲಿ ಅವರ ಆತ್ಮಕಥನ 'ನೆಲ ಕಚ್ಚಿದ ಗುಬ್ಬಚ್ಚಿ'ಯಲ್ಲಿ ಭರತ್‌ಪುರ್ ಪಕ್ಷಿಧಾಮದ ಬಗ್ಗೆ ವಿವರವಾಗಿ ಬರೆದಿದ್ದಾರೆ. ಅವರ ಮಾತುಗಳು ಹೀಗಿವೆ :

"ಈ ಪಕ್ಷಿಧಾಮದ ವೈಶಿಷ್ಟ್ಯವೆಂದರೆ, ನಿಯಮಿತ ಋತುಮಾನಗಳಲ್ಲಿ ಆಯಾ ಸ್ಥಳೀಯ ಹಾಗೂ ವಲಸೆ ನೀರು ಹಕ್ಕಿಗಳಿಂದ ತುಂಬಿರುತ್ತದೆ. ಅಲ್ಲಿನ ಪಕ್ಷಿ ಪ್ರಭೇದಗಳ ವೈವಿಧ್ಯತೆ ಅನುಪಮವಾದದ್ದು. ಅಲ್ಲಿ ಪಕ್ಷಿ ವೀಕ್ಷಕರಿಗೆ ಅರ್ಧ ವರ್ಷಕಾಲ ಅಥವಾ ಅದಕ್ಕಿಂತ ಹೆಚ್ಚು ಕಾಲ ಪಕ್ಷಿ ವೀಕ್ಷಣೆಯ ಅವಕಾಶ ಲಭಿಸುತ್ತದೆ. ಈ ರೀತಿಯ ಅಡೆತಡೆಯಿಲ್ಲದ ದೀರ್ಘ ಅವಧಿಯ ಜಲ ಪಕ್ಷಿಗಳ ವೀಕ್ಷಣಾ ಸೌಲಭ್ಯವು ಒದಗುವ ಕ್ಷೇತ್ರವು ಬಹುಶಃ ಜಗತ್ತಿನಲ್ಲಿಯೇ ಬೇರೊಂದಿಲ್ಲ. ಪಕ್ಷಿಪ್ರಿಯ ಪ್ರವಾಸಿಗರಿಗೂ, ಪಕ್ಷಿ ಛಾಯಾಚಿತ್ರ ಗ್ರಾಹಕರಿಗೂ ಪ್ರಿಯವಾದ ತಾಣ.

ಖೇಲಾದೇವ್ ಪಕ್ಷಿಧಾಮ ನೀರುಹಕ್ಕಿಗಳ ಅಭಯಾಶ್ರಯವಾಗಿ ಅನಂತರ ರಾಷ್ಟ್ರೀಯ ಉದ್ಯಾನವನವಾಗುವುದಕ್ಕೆ ಮುಂಚೆ ಅದು ಭರತ್‌ಪುರ್ ಅರಸರ ಖಾಸಗಿ ಬಾತು ಶಿಕಾರಿ ತಾಣವಾಗಿತ್ತು. ಆಗೀಗ ಖುಷಿಗಾಗಿ ಬಾತುಗಳನ್ನು ಗುಂಡಿಟ್ಟು ಹೊಡೆಯುತ್ತಿದ್ದುದಲ್ಲದೆ, ಪ್ರತಿಯೊಂದು ನಿಯಮಿತ ಋತುವಿನಲ್ಲಿ ಮೂರ್ನಾಲ್ಕು ದೊಡ್ಡ ಶಿಕಾರಿಗಳನ್ನು ಏರ್ಪಡಿಸುತ್ತಿದ್ದರು. ಅವಕ್ಕೆ ವೈಸರಾಯ್‌ಗಳು, ಗವರ್ನರ್‌ಗಳು, ಉನ್ನತ ಸಿವಿಲ್ ಹಾಗೂ ಮಿಲಿಟರಿ ಅಧಿಕಾರಿಗಳು ಮತ್ತು ಇತರ ಸಂಸ್ಥಾನದ ಅರಸು ಬಾಂಧವರನ್ನು ಆಹ್ವಾನಿಸುತ್ತಿದ್ದರು.

ಭಾರತ ಸ್ವತಂತ್ರವಾದಾಗ ಭರತ್‌ಪುರ್ ಸಂಸ್ಥಾನದ ಅರಸರು ಅಧಿಕಾರ ಹಸ್ತಾಂತರಿಸುವಾಗ ಇಲ್ಲಿ ಶಿಕಾರಿಗೆ ತಮಗೆ ಮೀಸಲಿರಿಸಬೇಕೆಂಬ ಷರತ್ತನ್ನು ಒಡ್ಡಿದರು. ಆ ಸಂದರ್ಭದಲ್ಲಿ ಸರ್ಕಾರ ಅವರ ಷರತ್ತನ್ನು ಮನ್ನಿಸಿತು. ಮಹಾರಾಜರು ತಾವೊಬ್ಬರೇ ಶಿಕಾರಿಗೆ ಅನುಮತಿ ಪಡೆದಿರುವುದಕ್ಕೆ ಅವರ ವಿರೋಧಿ ಗುಂಪು ಅಸಮಾಧಾನ ತಾಳಿ ಅವರ ವಿರುದ್ಧ ಆಂದೋಲನ ಪ್ರಾರಂಭಿಸಿತು. ಕುಟಿಲ ಬುದ್ಧಿಯ ರಾಜಕಾರಣಿಗಳ ಬೆಂಬಲದೊಂದಿಗೆ ಈ ಪಕ್ಷಿಧಾಮವನ್ನು ಸಂಪೂರ್ಣ ಧ್ವಂಸ ಮಾಡುವ ಪಿತೂರಿ ಪ್ರಾರಂಭವಾಯಿತು. ಆಕಸ್ಮಿಕವಾಗಿ ಈ ಸಂಚಿನ ಸುಳಿವು ನನಗೆ ಸಿಕ್ಕಿತು. ತಕ್ಷಣ ಪ್ರಧಾನಿ ನೆಹರೂ ಅವರ ಗಮನಕ್ಕೆ ತಂದು ಈ ವಿಧ್ವಂಸಕ ಕಾರ್ಯವನ್ನು ತಡೆಗಟ್ಟಲು ಕೋರಿದೆ. ಅವರು ತಕ್ಷಣ ಕೃಷಿ ಹಾಗೂ ನೀರಾವರಿ ಸಚಿವ ರಫಿ ಅಹಮದ್ ಕಿದ್ವಾಯಿ ಅವರ ಮೂಲಕ ತಿರುಗಿ ಬಿದ್ದಿದ್ದ ರೈತರ ಕೋಪ ಶಮನಗೊಳಿಸಿ, ಕಾಲಕ್ರಮೇಣ ತಮ್ಮ ಶಿಕಾರಿ ಹಕ್ಕುಗಳನ್ನು ಬಿಟ್ಟುಕೊಡುವಂತೆ ಮಹಾರಾಜರನ್ನು ಪುಸಲಾಯಿಸಿ ನೈತಿಕ ಒತ್ತಡವನ್ನು ತಂದರು. ಈ ರೀತಿಯಲ್ಲಿ ನಿರ್ನಾಮವಾಗಿ ಹೋಗುತ್ತಿದ್ದ ಈ ನೀರುಹಕ್ಕಿಗಳ ತಾಣವನ್ನು ಉಳಿಸಲಾಯಿತು".

ಪ್ರತಿಕ್ರಿಯಿಸಿ: feedback@sudha.co.in

### ಸಾಹಿತ್ಯದಲ್ಲಿ ಕ್ರೌಂಚ

'ಮಾ ನಿಷಾದ ಪ್ರತಿಷ್ಠಾಂ ತ್ವಮಗಮಃ ಶಾಶ್ವತೀಃ ಸಮಾಃ। ಯತ್ಕ್ರೌಂಚಮಿಥುನಾದೇಕಮ್ ಅವಧೀಃ ಕಾಮಮೋಹಿತಮ್' ಎಂಬ ಶ್ಲೋಕ ಮಹರ್ಷಿ ವಾಲ್ಮೀಕಿ ಬಾಯಿಂದ ಬರಲು ಕಾರಣವೂ ಕ್ರೌಂಚವಧೆಯೇ ಕಾರಣವಲ್ಲವೇ. ರಾಮಾಯಣದ ಸೃಷ್ಟಿಗೆ ಕಾರಣವೆಂದು ಕ್ರೌಂಚಗಳನ್ನು ಪೂಜನೀಯವಾಗಿ ಪರಿಗಣಿಸಿ ಅವುಗಳನ್ನು ಕೊಲ್ಲಬಾರದು ಎಂಬ ಭಾವನೆ ಬೆಳೆದಿದೆ.

ರಘುವಂಶದ ಶ್ಲೋಕವೊಂದರಲ್ಲಿ ಮಹಾಕವಿ ಕಾಳಿದಾಸ, 'ವಿ' ಆಕಾರದಲ್ಲಿ ಹಾರುತ್ತಿರುವ ಸಾರಸ್ ಕ್ರೌಂಚಗಳ ವಿನ್ಯಾಸವನ್ನು ಸುಂದರ ಉಪಮೆಯಾಗಿ ಬಳಸಿದ್ದಾನೆ. ಮಹರ್ಷಿ ವಾಲ್ಮೀಕಿ ಸಹ ಹಲವೆಡೆ ಸಾರಸ್ ಕ್ರೌಂಚಗಳ ಪ್ರಸ್ತಾಪ ಮಾಡಿರುವನು.

